# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೧<br>Part – I | ಬೆಂಗಳೂರು, ಸೋಮವಾರ, ೨೭, ಜುಲೈ, ೨೦೨೬ (ಶ್ರಾವಣ, ೦೫, ಶಕವರ್ಷ, ೧೯೪೮)<br>BENGALURU, MONDAY, 27, JULY, 2026 (SHRAVANA ,05,ShakaVarsha,1948) | ನಂ. ೫೬೫<br>No.565 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸದಾಗಿ 'ಎ' ಖಾತಾ ನೀಡಲು ಸೀಮಿತ ಅವಧಿಗೆ (ದಿನಾಂಕ 23.08.2026 ರವರೆಗೆ) ಶುಲ್ಕವನ್ನು ಕಡಿತಗೊಳಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 272 ಎಂಎನ್‌ಜೆ 2025(ಇ), ದಿನಾಂಕ:16.07.2025.
2. ಸರ್ಕಾರದ ಆದೇಶ ಸಂಖ್ಯೆ: ನಅಇ 317 ಎಂಎನ್‌ಜೆ 2026, ದಿನಾಂಕ 14.05.2026.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರ ಏಕ ಕಡತ ಸಂಖ್ಯೆ: GBA-RO0GEN/54/2026-REV-GBA.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಬೆಂಗಳೂರಿನ ಪರಿಷ್ಕೃತ ಮಹಾಯೋಜನೆ 2015 ಕ್ಕೆ ತಿದ್ದುಪಡಿ ಮಾಡಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ-17 ರಲ್ಲಿನ ಅವಕಾಶದಂತೆ ಏಕ ನಿವೇಶನ ವಿನ್ಯಾಸ ಅನುಮೋದನೆಗೆ ನಿಯಮಾವಳಿಗಳನ್ನು ಅಳವಡಿಸಲಾಗಿದೆ. ಈ ನಿಯಮಾವಳಿಗಳಲ್ಲಿ 2000 ಚ.ಮೀ. ವರೆಗಿನ ಏಕ ನಿವೇಶನದ ವಿನ್ಯಾಸಗಳಿಗೆ ಅನುಮೋದನೆ ನೀಡುವಾಗ ಭೂ ಮಾಲೀಕರು ಉದ್ಯಾನವನ ಅಥವಾ ಮೇಲ್ಮೈ ವಾಹನ ನಿಲುಗಡೆಯ (Surface Parking) ಕಾಯ್ದಿರಿಸುವಿಕೆಯ ಬದಲಿಗೆ ಕರ್ನಾಟಕ ನೋಂದಣಿ ಕಾಯ್ದೆ 1957ರ ಕಲಂ-45 ರಡಿಯಲ್ಲಿ ಅಧಿಸೂಚಿಸಲಾಗುವ ಭೂ ಪರಿವರ್ತಿತ ಅಭಿವೃದ್ಧಿ ಹೊಂದದೇ ಭೂಮಿಗೆ ಅನ್ವಯಿಸುವ ಮಾರ್ಗಸೂಚಿ ಬೆಲೆಯ ಶೇಕಡ 5 ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಪಾವತಿಸಲು ನಿರ್ದಿಷ್ಟಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಆಸ್ತಿಗಳಿಗೆ ಸೀಮಿತ ಅವಧಿಗೆ (100 ದಿನಗಳು) ಅಂದರೆ ದಿನಾಂಕ:15.05.2026 ರಿಂದ 23.08.2026 ರವರೆಗೆ ಅನ್ವಯಿಸಿ 'ಬಿ' ಖಾತಾ ಯಿಂದ 'ಎ' ಖಾತಾ ಪರಿವರ್ತನೆ ಪ್ರಕ್ರಿಯೆಯಡಿಯಲ್ಲಿ ಏಕನಿವೇಶನಗಳ ವಿನ್ಯಾಸ ಅನುಮೋದನೆ ಸಂಬಂಧ ಪಾವತಿಸಿಕೊಳ್ಳಬೇಕಾದ ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5

ಕ್ಕೆ ಬದಲಾಗಿ ಶೇ.2 ಕ್ಕೆ ಕಡಿತಗೊಳಿಸಿ ಆದೇಶಿಸಿದೆ. ಸದರಿ ಆದೇಶದಲ್ಲಿ ವಿಧಿಸಿರುವ ನಿಬಂಧನೆಗಳಲ್ಲಿ ಕ್ರ.ಸಂ. 5 ರಲ್ಲಿ ಕೆಳಕಂಡಂತೆ ನಿರ್ದಿಷ್ಟಪಡಿಸಲಾಗಿದೆ.

> "5. ಏಕ ನಿವೇಶನ ಅನುಮೋದನೆಯಡಿಯಲ್ಲಿ ಹೊಸದಾಗಿ 'ಎ' ಖಾತಾ ನೀಡಲಾಗುವ ಪ್ರಕರಣಗಳಲ್ಲಿ, ಚಾಲ್ತಿಯಲ್ಲಿರುವ ನಿಯಮಾವಳಿಯಂತೆ ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಷ್ಟು ಪಾವತಿಸಿರುವುದನ್ನು ಮುಂದುವರೆಸಲು".

ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರಿಂದ ಸ್ವೀಕೃತವಾಗಿರುವ ಏಕ ಕಡತದ ಪ್ರಸ್ತಾವನೆಯಲ್ಲಿ, ಬೆಂಗಳೂರು ನಗರದ ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಯವರು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬೆಂಗಳೂರು ನಗರ ಪಾಲಿಕೆಗಳ ಕಛೇರಿಗಳಿಗೆ ಭೇಟಿ ನೀಡಿ, 'ಬಿ' ಖಾತಾ ಯಿಂದ 'ಎ' ಖಾತಾ ಪರಿವರ್ತನೆಗೆ ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ಕ್ಕೆ ಕಡಿತಗೊಳಿಸಿ, ಏಕ ನಿವೇಶನ ಅನುಮೋದನೆ ಅಡಿಯಲ್ಲಿ ಹೊಸದಾಗಿ 'ಎ' ಖಾತಾ ನೀಡಲಾಗುವ ಪ್ರಕರಣಗಳಲ್ಲಿ ಮಾರ್ಗಸೂಚಿ ಬೆಲೆಯ ಶೇ. 5 ರಷ್ಟನ್ನೇ ಮುಂದುವರೆಸಿರುವುದು ಒಂದೇ ರೀತಿಯ ಸ್ವತ್ತುಗಳಿಗೆ ಬೇರೆ ಬೇರೆ ರೀತಿಯ ಶುಲ್ಕ ನಿಗದಿಪಡಿಸಿದಂತಾಗುತ್ತಿದ್ದು, ಇದರಿಂದ ಸಮಾನತೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ತಿಳಿಸಿದ್ದು, ಈ ರೀತಿಯ ಎರಡು ಪ್ರಕರಣಗಳಲ್ಲಿ ಬೇರೆ ಬೇರೆ ರೀತಿಯ ಶುಲ್ಕಗಳನ್ನು ವಿಧಿಸಿರುವುದರಿಂದ ಆಸ್ತಿ ಮಾಲೀಕರಲ್ಲಿ ಗೊಂದಲ ಉಂಟಾಗಿರುವುದಾಗಿ, ಶೇ. 5 ರಷ್ಟು ವಿಧಿಸಲಾಗಿರುವ ಶುಲ್ಕವು ಕಡಿಮೆ ವಿಸ್ತೀರ್ಣ ಇರುವ ಸ್ವತ್ತುಗಳನ್ನು ಹೊಂದಿರುವ ಬಡ ವರ್ಗದ ಸಾಮಾನ್ಯ ನಾಗರೀಕರಿಗೆ ಆರ್ಥಿಕ ಹೊರೆಯಾಗುತ್ತಿರುವುದಾಗಿ ತಿಳಿಸಿರುವುದಾಗಿ, ಅಲ್ಲದೇ ಈ ಸಂಬಂಧ ಮನವಿಗಳನ್ನು ಸಲ್ಲಿಸುತ್ತಿರುವುದಾಗಿ ತಿಳಿಸಲಾಗಿದೆ.

ಹೊಸದಾಗಿ 'ಎ' ಖಾತಾ ಪಡೆಯಲು ಸುಮಾರು 5 ಲಕ್ಷ ಪ್ರಕರಣಗಳು ಇರುವುದಾಗಿ ಅಂದಾಜಿಸಿದ್ದು, ಈವರೆಗೆ ಕೇವಲ 7000 ಅರ್ಜಿಗಳನ್ನು ನಾಗರೀಕರಿಂದ ಸ್ವೀಕರಿಸಿರುವುದಾಗಿ ತಿಳಿಸಿದ್ದು, ಮೇಲ್ಕಂಡಂತೆ ಎರಡೂ ರೀತಿಯ ಪ್ರಕರಣಗಳಲ್ಲಿ ಏಕ ರೂಪದ ಶುಲ್ಕವನ್ನು ವಿಧಿಸಿದಲ್ಲಿ ಬೆಂಗಳೂರಿನ ಹೆಚ್ಚಿನ ಆಸ್ತಿ ಮಾಲೀಕರು ಯೋಜನೆಯ ಪ್ರಯೋಜನಗಳನ್ನು ಪಡೆಯಲು ಸಾಧ್ಯವಾಗುವುದಾಗಿ, ಅಲ್ಲದೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳ ಆದಾಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವುದರಿಂದ ದಿನಾಂಕ 23.08.2026 ರವರೆಗೆ ಸೀಮಿತವಾದಂತೆ, 'ಬಿ' ಖಾತಾವನ್ನು 'ಎ' ಖಾತಾ ಆಗಿ ಪರಿವರ್ತಿಸಲು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಏಕ ನಿವೇಶನದ ಅನುಮೋದನೆ ಅಡಿಯಲ್ಲಿ ಹೊಸದಾಗಿ 'ಎ' ಖಾತಾ ಬಯಸಿ ಅರ್ಜಿ ಸಲ್ಲಿಸುವ ಪ್ರಕರಣಗಳಲ್ಲಿಯೂ ಸಹ ಅನ್ವಯಿಸಿ, ವಿಶೇಷ ರಿಯಾಯಿತಿಯನ್ನು ನೀಡಲು ಪರಿಗಣಿಸಿ ಏಕ ನಿವೇಶನದ ಅನುಮೋದನೆಗೆ ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ಕ್ಕೆ ಕಡಿತಗೊಳಿಸಬೇಕೆಂದು ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಸೀಮಿತ ಅವಧಿಗೆ ಅಂದರೆ, ದಿನಾಂಕ 23.08.2026 ರವರೆಗೆ ಅನ್ವಯವಾಗುವಂತೆ, ಏಕ ನಿವೇಶನದ ಅನುಮೋದನೆಯಡಿಯಲ್ಲಿ ಹೊಸದಾಗಿ 'ಎ' ಖಾತಾ ಪಡೆಯಲು ಅರ್ಜಿ ಸಲ್ಲಿಸಲಾಗುವ ಪ್ರಕರಣಗಳಲ್ಲಿ ಪಾವತಿಸಿಕೊಳ್ಳಬೇಕಾದ ಆಸ್ತಿಯ ಮಾರ್ಗಸೂಚಿ ದರದ ಶೇಕಡ 5 ಕ್ಕೆ ಬದಲಾಗಿ ಶೇಕಡ 2ಕ್ಕೆ ಕಡಿತಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಯು ಸೂಕ್ತವೆಂದು ಮನಗಂಡು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ನಅಇ 317 ಎಂಎನ್‌ಜೆ 2026, ಬೆಂಗಳೂರು,**
**ದಿನಾಂಕ: 24.07.2026.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಆಸ್ತಿಗಳಿಗೆ ಸೀಮಿತ ಅವಧಿಗೆ ಅಂದರೆ ದಿನಾಂಕ: 23.08.2026 ರವರೆಗೆ ಅನ್ವಯಿಸಿ ಏಕ ನಿವೇಶನದ ಅನುಮೋದನೆ ಅಡಿಯಲ್ಲಿ ಹೊಸದಾಗಿ 'ಎ' ಖಾತಾ ಪಡೆಯಲು ಅರ್ಜಿ ಸಲ್ಲಿಸಲಾಗುವ ಪ್ರಕರಣಗಳಲ್ಲಿ ಏಕನಿವೇಶನಗಳ ವಿನ್ಯಾಸ ಅನುಮೋದನೆ ಸಂಬಂಧ ಪಾವತಿಸಿಕೊಳ್ಳಬೇಕಾದ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇಕಡ 5 ಕ್ಕೆ ಬದಲಾಗಿ ಶೇಕಡ 2ಕ್ಕೆ ಕಡಿತಗೊಳಿಸಿ ಆದೇಶಿಸಿದೆ.

**ನಿಬಂಧನೆಗಳು:-**

1. ದಿನಾಂಕ 23.08.2026 ರವರೆಗೆ ಏಕ ನಿವೇಶನದ ಅನುಮೋದನೆ ಅಡಿಯಲ್ಲಿ ಹೊಸದಾಗಿ 'ಎ' ಖಾತಾ ಪಡೆಯಲು ಅರ್ಜಿ ಸಲ್ಲಿಸುವ ಪ್ರಕರಣಗಳಲ್ಲಿ ಮಾತ್ರ ಪಾವತಿಸಬೇಕಾದ ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಿಂದ ಶೇ.2 ಕ್ಕೆ ಕಡಿತಗೊಳಿಸಿ ಪಾವತಿಸಿಕೊಳ್ಳುವುದು.
2. ಈಗಾಗಲೇ 'ಎ' ಖಾತಾ ಪಡೆಯಲು ಅರ್ಜಿ ಸಲ್ಲಿಸಿ, ಬಾಕಿ ಉಳಿದಿರುವ ಅಥವಾ ಅನುಮೋದನೆಯಾಗಿರುವ ಆದರೆ, ಮೊತ್ತ ಪಾವತಿಸದೇ ಬಾಕಿ ಉಳಿದಿರುವ ಪ್ರಕರಣಗಳಲ್ಲಿಯೂ ಸಹ ದಿನಾಂಕ 23.08.2026 ರೊಳಗಾಗಿ ಪಾವತಿಸಿದಲ್ಲಿ ಶೇ.2 ರಷ್ಟು ಮಾರ್ಗಸೂಚಿ ದರವನ್ನು ಅನ್ವಯಿಸಿ ಪಾವತಿಸಿಕೊಳ್ಳುವುದು.
3. ಮೇಲ್ಕಂಡ ಕ್ರ.ಸಂ. 1 ಮತ್ತು 2 ರ ಪ್ರಕರಣಗಳಲ್ಲಿ online ವ್ಯವಸ್ಥೆ ಮುಖಾಂತರ demand notice / ಪರಿಷ್ಕೃತ demand notice ನೀಡುವುದು.
4. ಚಾಲ್ತಿಯಲ್ಲಿರುವ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.
5. ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ರಷ್ಟು ದರದಲ್ಲಿ ಪಾವತಿಯ ಅವಕಾಶವು ದಿನಾಂಕ:23.08.2026ರ ನಂತರ ಅಸ್ತಿತ್ವದಲ್ಲಿರುವುದಿಲ್ಲ. ತದನಂತರ ಸ್ವೀಕೃತವಾಗುವ ಅರ್ಜಿಗಳಿಗೆ ಚಾಲ್ತಿಯಲ್ಲಿರುವ ಅಧಿಸೂಚನೆಯಂತೆ ಶೇ.5 ರಷ್ಟು ಮಾರ್ಗಸೂಚಿ ದರದಂತೆ ಮೊತ್ತ ಪಾವತಿಸಿಕೊಳ್ಳುವುದು.
6. ನಿಗದಿತ ಅವಧಿ ಮುಕ್ತಾಯಗೊಂಡ ನಂತರ ಈ ರಿಯಾಯಿತಿಯನ್ನು ನೀಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರವಾಗಿ ಹೊಣೆಮಾಡಿ, ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್ ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಬಿಡಿಎ & ಬೆಂ-1)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU